ಎಲ್ಲರೂ ಪೂಜಿಸುತ್ತೇನೆಂದರೂ ನನಗದು ಮುಖ್ಯವಲ್ಲ. ಅಂಥವನು ನಿನ್ನ ಹತ್ಯೆಯಲ್ಲಿ ಏನು ಪಾತ್ರ ವಹಿಸಿದ ಎಂಬುದರ ಬಗ್ಗೆ ನನಗೆ ಗೊತ್ತಾಗಬೇಕಾಗಿದೆ.

ಕಥೆಗಳ ಪ್ರಕಾರ, ಆವತ್ತು ಯುದ್ಧ ಗೆದ್ದ ರಾತ್ರಿ ನಡೆದ ಕೂಟದಲ್ಲಿ (ನೀನು ಬಕ್ತಾಶನನ್ನು ಉಳಿಸಿದ ಯುದ್ಧ!) ರುಡಾಕಿ ನಿನ್ನ ರಹಸ್ಯವನ್ನು ಬಯಲು ಮಾಡಿದ. ಅವನು ಅವತ್ತು ಜಾಸ್ತಿ ಕುಡಿದಿದ್ದನೋ ಅಥವಾ ನಿನ್ನ ಕಾವ್ಯದ ಬಗ್ಗೆ ಅವನಿಗೆ ಹೊಟ್ಟೆಕಿಚ್ಚು ಜಾಸ್ತಿಯಾಯಿತೋ ಗೊತ್ತಿಲ್ಲ. ಎರಡೂ ಇರಬೇಕು. ಅವತ್ತು ಅವನ ಬಾಯಿಂದ ನಿನ್ನ ಸಾಲುಗಳು ಪುಂಖಾನುಪುಂಖವಾಗಿ ಹೊರಬಂದವು. ಅಲ್ಲಿ ಸೇರಿದ್ದ ಸೈನಿಕರು, ಕವಿಗಳು ಅದನ್ನು ಕೇಳಿ ಹುಚ್ಚೆದ್ದುಹೋಗಿ ಅವನ ಬಳಿ ಬಂದು 'ಇಷ್ಟು ಚೆನ್ನಾಗಿ ಕವಿತೆ ಬರೆದವರು ಯಾರು?' ಎಂದು ಕೇಳಿದರು. ಅವನು ಕೊಟ್ಟ ಉತ್ತರ ನಿನ್ನ ಭವಿಷ್ಯವನ್ನು ಮಣ್ಣುಪಾಲು ಮಾಡಿತು. ಈಗಲೂ ಹಾಗೆಯೇ ರಾಬಿಯಾ, ನಮ್ಮಂಥ ಹೆಂಗಸರು ಮಲಗಿರುವಾಗಲೂ ಈ ದೇಶದಲ್ಲಿ ನಮ್ಮನ್ನು ಇರಿದುಕೊಲ್ಲುವ ಸಂಚುಗಳು ಸದ್ದಿಲ್ಲದೇ ನಡೆಯುತ್ತವೆ.

ಕಥೆಗಳ ಪ್ರಕಾರ, ಅಂದು ರುಡಾಕಿ ಬಡಬಡಿಸಿ 'ಇದನ್ನು ಬರೆದಿದ್ದು ರಾಜನ ಮಗಳು ರಾಬಿಯಾ. ಆಕೆ ಪ್ರೀತಿಯಲ್ಲಿ ಮುಳುಗಿರುವುದರಿಂದಲೇ ಕವಿತೆಗಳು ಇಷ್ಟು ಅದ್ಭುತವಾಗಿವೆ. ಅದೂ ನಮ್ಮೆಲ್ಲರ ಗುಲಾಮನಾಗಿರುವ ಬಕ್ತಾಶನ ಪ್ರೇಮದಲ್ಲಿ...' ಎಂದು ವದರಿಬಿಟ್ಟ (ಅಥವಾ ಚಾಣಾಕ್ಷವಾಗಿ ನಿನ್ನ ಹೆಸರು ಹೇಳಿದ). ನಿನ್ನ ಹುಟ್ಟೂರು ಬುಖಾರಾದಿಂದ ದೂರದ ಊರಲ್ಲಿ ಕುಡಿದು ಮತ್ತೇರಿದವರ ಕೂಟದಲ್ಲಿ ನಡೆದಿದ್ದು ಇಷ್ಟು ರಾಬಿಯಾ. ರುಡಾಕಿ ನಿನಗೆ ಮಾತ್ರ ಮೋಸ ಮಾಡಲಿಲ್ಲ. ನಿನ್ನ ಪ್ರತಿಭೆಗೆ, ನಿನ್ನ ಜೀವನ, ಸಂತೋಷಕ್ಕೆ ದೊಡ್ಡ ಮೋಸ ಮಾಡಿಬಿಟ್ಟ. ನಿನ್ನ ಹತ್ಯೆಯ ಮುಖ್ಯ ಸಂಚುಕೋರರಲ್ಲಿ ಅವನೂ ಒಬ್ಬ. ಅವನ ವಿದ್ವತ್ತಿಗೆ, ದೈವಭಕ್ತಿಗೆ ಕೆಲವರು ಅವನನ್ನು ಪೂಜೆ ಮಾಡುತ್ತಾರೆ ಎಂಬದು ಗೊತ್ತಿದೆ. ಆದರೆ ಅವ್ಯಾವಕ್ಕೂ ನಾನು ಕಿಮ್ಮತ್ತು ಕೊಡುವುದಿಲ್ಲ. ಅಷ್ಟು ದೊಡ್ಡವನಾಗಿ ಗೊತ್ತಿದ್ದೋ ಗೊತ್ತಿಲ್ಲದೆಯೋ ಅವನು ನಿನ್ನ ಹತ್ಯೆಗೆ ಮುನ್ನುಡಿ ಬರೆದನಲ್ಲ, ಅದನ್ನು ನಾನು ಸಹಿಸುವುದಿಲ್ಲ. ಅದಕ್ಕೇ ರಾಬಿಯಾ, ಇವತ್ತಿಗೂ ರಹಸ್ಯಗಳನ್ನು ಹೇಳಿ ನಾವ್ಯಾರೂ ನೆಮ್ಮದಿಯಿಂದಿರಲು ಸಾಧ್ಯವಿಲ್ಲ.

ರುಡಾಕಿಯ ಮಾತು ಕೇಳಿದ ದಿನವೇ ನಿನ್ನ ತಮ್ಮ ನಿನಗೆ ಕಳಂಕ-ಕೀರ್ತಿ ಎರಡನ್ನೂ ದಯಪಾಲಿಸಿಬಿಟ್ಟ. ಆ ಕ್ಷಣವೇ ಅವನು ಕೂಟದಿಂದ ಹೊರಬಂದು ಚಕ್ರವರ್ತಿಯ ಕುಲದ ಮರ್ಯಾದೆಗೆ ಮಸಿ ಬಳಿದ ನಿನ್ನ ಹತ್ಯೆಯ ಸಂಚು ರೂಪಿಸಿದ. ರಾಬಿಯಾ, ನಿನ್ನ ಕಥೆಯನ್ನು ಚರಿತ್ರೆಯ ಪಠ್ಯ ಪುಸ್ತಕಗಳಲ್ಲಿ, ಕಥೆಗಳು, ವೆಬ್‌ಬ್ಲಾಗುಗಳಲ್ಲಿ ಹೇಗೆ ಹೇಳುತ್ತಾರೆ ಎಂಬುದು ನಿನಗೆ ಗೊತ್ತಿಲ್ಲ. ಸರಿಯಾಗಿ ಹೇಳಬೇಕು ಎಂದರೆ – ಇಲ್ಲಿ ಯಾವ ಮರ್ಯಾದೆಯೂ ಇಲ್ಲ, ಯಾವ ಹತ್ಯೆಯ ಪಾಪಪ್ರಜ್ಞೆಯೂ ಇಲ್ಲ. ಪುರುಷಾಧಿಕಾರ, ರಕ್ತದಾಹಗಳನ್ನು ಹಣೆಬರಹ, ದುರಂತ ಪ್ರೇಮ ಎಂದೆಲ್ಲ ಕಥೆ ಹೊಸೆದರೆ ಎಲ್ಲರೂ ಶತಮಾನಗಳವರೆಗೆ ಬಾಯಿಬಿಟ್ಟುಕೊಂಡು ಕೇಳುತ್ತಾರೆ ಅಷ್ಟೇ.

ನಿನ್ನ ಕಥೆಯನ್ನು ಹೀಗೆ ಮುಗಿಸುತ್ತಾರೆ: ನಿನ್ನ ತಮ್ಮ ನಿನ್ನನ್ನು ಸ್ನಾನಗೃಹದಲ್ಲಿ ಬಂಧಿಸಿ ಎರಡೂ ಮುಂಗೈಗಳನ್ನು ಕತ್ತರಿಸಿದ. ಸ್ನಾನಗೃಹದಲ್ಲಿ ನಿನ್ನನ್ನು ಒಬ್ಬಳೇ ಬಿಟ್ಟು ಅದಕ್ಕೆ ಹೊರಗಿನಿಂದ ಬೀಗ ಹಾಕಿದರು. ಸ್ನಾನಗೃಹದಿಂದ ಹರಿದುಬಂದ ರಕ್ತದಲ್ಲಿ ನಿನ್ನ ಕವಿತೆಗಳಿದ್ದವು, ನಿನ್ನ ಅಸಹಾಯಕ ಚೀತ್ಕಾರಗಳಿದ್ದವು. ಯಾರೊಬ್ಬರೂ ನಿನ್ನನ್ನು ರಕ್ಷಿಸಲಿಲ್ಲ. ಬೆಳಗ್ಗೆ ರಕ್ತದಲ್ಲಿ ತೊಯ್ದ ನಿನ್ನ ದೇಹವನ್ನು ಎತ್ತಿಹಾಕಲು ಬಂದಾಗ ನೆತ್ತರ ಮಡುವಿನಲ್ಲಿ ಅದ್ದಿದ ಬೆರಳುಗಳಿಂದ ರಕ್ತ ಜಿನುಗುತ್ತಿತ್ತು, ಗೋಡೆಗಳ ಮೇಲಿಂದ ನಿನ್ನ ಕವಿತೆಗಳು ಹನಿಯುತ್ತಿದ್ದವು.

ಸತ್ತ ಮೇಲೆ ನೀನು ಯಾರಿಗೂ ತೊಂದರೆ ಕೊಡಲಿಲ್ಲ ರಾಬಿಯಾ. ಅದಕ್ಕಾಗಿಯೇ, ನೀನು ಚಿಕ್ಕ ವಯಸ್ಸಿನಲ್ಲೇ ಮದುವೆಗೆ ಮುಂಚೆಯೇ ಸತ್ತರೂ, ಎಲ್ಲ ಸೇರಿ ನಿನ್ನನ್ನು 'ಪರ್ಶಿಯನ್ ಕಾವ್ಯದ ತಾಯಿ' ಎಂದು ಹೊಗಳಿದರು. ನಾವು ಇಂಥ ಸುಳ್ಳುಗಳನ್ನು ಬೊಗಳುತ್ತಿದ್ದೇವೆ ರಾಬಿಯಾ. ಇದರ ನಡುವೆ ಪ್ರೇಮ-ದ್ವೇಷ, ಕಾವ್ಯದ ಕಥೆಗಳು ಎಗ್ಗಿಲ್ಲದೆ ಹಬ್ಬುತ್ತಲೇ ಇರುತ್ತವೆ.

ನಿನ್ನಾತ್ಮಕ್ಕೆ ಶಾಂತಿ ಸಿಕ್ಕಲಿ ರಾಬಿಯಾ. ಅಫ್ಘಾನಿಸ್ತಾನದಲ್ಲಿ, ಇವತ್ತಿಗೂ ಕೂಡ ಪ್ರೀತಿ ಎಂಬ ಮಾತು ಆಡಿದರೂ ನಿನ್ನ ಕೊಲೆಯಾಯಿತೆಂದೇ ಅರ್ಥ ಎಂಬುದನ್ನು ನಿನಗೆ ಮತ್ತೊಮ್ಮೆ ಹೇಳಬೇಕಿತ್ತು.

●